# **ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ ಹಿರೇಕೆರೂರು**

ಸಿ.ಸಿ. ನಂಃ 252/2023

ಸಿ.ಡಬ್ಲ್ಯೂಃ 5
**ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರುಃ - ರತ್ನಮ್ಮ
ಗಂಡನ ಹೆಸರು - ಹನುಮಂತಪ್ಪ ಮಾಕನೂರು
ವಯಸ್ಸುಃ - 52 ವರ್ಷ
ಉದ್ಯೋಗ - ಕೂಲಿ ಕೆಲಸ
ವಾಸಸ್ಥಳ - ಮಾಸೂರು

ದಿನಾಂಕಃ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರಾದ ಲಚ್ಚಪ್ಪ, ಕಿರಣ, ಜ್ಯೋತಿ ಮತ್ತು ಕಾಳಮ್ಮ ಅವರ ಪರಿಚಯವಿದೆ. ಆರೋಪಿತರಾದ ಸೋಮಪ್ಪ ಮತ್ತು ಬಸವರಾಜ ಬಂದಿಲ್ಲ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆರೋಪಿತರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಅವರ ನ್ಯಾಯವಾದಿಗಳು ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಸಾಕ್ಷಿದಾರರಾದ ಮಹೇಶ, ಗಿರೀಶ, ಭಾಗ್ಯಮ್ಮ ಮತ್ತು ರಾಜೇಶ್ವರಿ ಅವರ ಪರಿಚಯವಿದೆ.

3. ರಾಜೇಶ್ವರಿ ನನ್ನ ತಂಗಿಯ ಮಗಳು. ಆಕೆಯ ಮದುವೆ 2012 ರಲ್ಲಿ ಆಗಿದೆ. ಅವರಿಗೆ ಮೂವರು ಹೆಣ್ಣು ಮಕ್ಕಳಾದವು. 2022 ರಲ್ಲಿ ಜಗಳವಾಗಿದೆ. ಚಿಕ್ಕ ಮಗುವಿನ ಡಿಲೆವರಿಗೆ ತವರು ಮನೆಗೆ ಹೋಗಿ ಇಪ್ಪತ್ತು ದಿವಸ ಇದ್ದಳು. ಆಮೇಲೆ ಅಕೆಯ ಗಂಡ ಸೋಮಪ್ಪ ನೋಡಿಕೊಂಡು ಬಂದ. ಮತ್ತೆ ಹೆಣ್ಣು ಮಗುವಾಗಿದೆ ಎಂದು ಜಗಳ ಮಾಡಿಕೊಂಡು ಹೋದವನು ವಾಪಸ್ಸು ಬಂದಿಲ್ಲ. ರಾಜೇಶ್ವರಿ ಲಚ್ಚಪ್ಪನ ಮನೆಯಲ್ಲಿ ಬಾಡಿಗೆಗೆ ಇದ್ದಳು. ಆ ಮನೆಯಲ್ಲಿದ್ದಾಗ ಸೋಮಪ್ಪನು

ಹೆಂಡತಿಗೆ ಕಿರಿ ಕಿರಿ ಮಾಡುತ್ತಿದ್ದ. ಆಮೇಲೆ ಮನೆ ಬಿಟ್ಟು ಹೋದ. ಆ ನಂತರ 4-5 ವರ್ಷಗಳವರೆಗೆ ನನ್ನ ತಂಗಿಯೇ ಸದರಿ ಮನೆಗೆ ಬಾಡಿಗೆ ಕೊಟ್ಟಿದ್ದಾಳೆ. ಸಾಮಾನುಗಳನ್ನು ಕೊಡಬಾರದು ಎಂದು ಸೋಮಪ್ಪನು ಲಚ್ಚಪ್ಪನಿಗೆ ಹೇಳುತ್ತಿದ್ದ. ಆಮೇಲೆ ನನ್ನ ಮಗ ಗಿರೀಶ ಮಹಿಳಾ ಸಂಘದವರನ್ನು ಕರೆದುಕೊಂಡು ಬಂದು ಸಾಮಾನುಗಳನ್ನು ತೆಗೆದುಕೊಂಡು ಬಂದು, ನಮ್ಮ ಮನೆ ಪಕ್ಕದಲ್ಲಿ ಬಾಡಿಗೆ ಮನೆ ಮಾಡಿದ. ಈ ಸಂಗತಿಗಳನ್ನು ಪೋಲಿಸರಿಗೆ ನಾನು ಹೇಳಿಲ್ಲ. ನನ್ನ ಮಗ ಹೇಳಿದ್ದಾನೆ. ಭಾಗ್ಯಮ್ಮಳೇ ಎಲ್ಲಾ ಖರ್ಚುಗಳನ್ನು ನೋಡುತ್ತಿದ್ದಾಳೆ. ಇಷ್ಟು ಬಿಟ್ಟರೇ ಬೇರೆ ವಿಷಯ ಗೊತ್ತಿಲ್ಲ. ಹಿಂಸೆಯನ್ನು ಕೊಟ್ಟರು ಎಂದು ಹೇಳಿದವರನ್ನು ಗುರುತಿಸುತ್ತೇನೆ. ಸೋಮಪ್ಪ ಈಗ ಬಂದಿಲ್ಲ.

**ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ 23-02-2022 ರಂದು ಗಲಾಟೆಯಾಗಿದೆ ಎಂದರೆ ಸರಿ. ಘಟನೆಯ ವಿಚಾರಗಳನ್ನು ತನಿಖೆಯ ಕಾಲದಲ್ಲಿ ಪೋಲಿಸರಿಗೆ ಹೇಳಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ 1 ರಿಂದ 4 ನೇ ಆರೋಪಿಗಳ ಪರ ಶ್ರೀ ಎ. ಎ. ಇ. ವಕೀಲರಿಂದಃ</u>**

ರಾಜೇಶ್ವರಿ ನನ್ನ ತಂಗಿಯ ಮಗಳು. ರಾಜೇಶ್ವರಿಯ ಮದುವೆಯಾದ ಒಂದು ವರ್ಷದವರೆಗೆ ಗಂಡನ ಮನೆಯಲ್ಲಿ ಅವರ ಅತ್ತೆ ಮಾವರ ಜೊತೆಯಲ್ಲಿ ಇದ್ದಳು ಎಂದರೆ ಸರಿ. ರಾಜೇಶ್ವರಿಗೂ ಹಾಗೂ ಅವರ ಅತ್ತೆ ಮಾವರ ಜೊತೆ ಸರಿಬಾರದ ಕಾರಣ ರಾಜೇಶ್ವರಿ ತನ್ನೆಲ್ಲ ಸಾಮಾನುಗಳನ್ನು ನಮ್ಮ ಮನೆಯಲ್ಲಿ ಇಟ್ಟು ತನ್ನ ತವರು ಮನೆಗೆ ಹೋದಳು ಎಂದರೆ ತವರು ಮನೆಗೆ ಹೋಗಿಲ್ಲ, ನನ್ನ ಮನೆಯಲ್ಲಿ ಇದ್ದಳು. ರಾಜೇಶ್ವರಿಗೂ ಹಾಗೂ ಅವರ ಅತ್ತೆ ಮಾವರ ಜೊತೆ ಸರಿಬಾರದ ಕಾರಣ ರಾಜೇಶ್ವರಿ ತನ್ನೆಲ್ಲ ಸಾಮಾನುಗಳನ್ನು ನಮ್ಮ ಮನೆಯಲ್ಲಿ ಇಟ್ಟು ತನ್ನ ತವರು ಮನೆಗೆ ಹೋದರು ಸಹ ಹೋಗಿಲ್ಲವೆಂದು ನನ್ನ ಮನೆಯಲ್ಲಿ ಇದ್ದಳೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 4 ತಿಂಗಳ ನಂತರ ಮಾಸೂರಿನ ಸಿದ್ದಪ್ಪನ ಗುಡ್ಡದಲ್ಲಿ ರಾಜೇಶ್ವರಿ ಹಾಗೂ ಆಕೆಯ ಗಂಡ ಸೋಮಪ್ಪ ಬಾಡಿಗೆ ಮನೆ ಮಾಡಿಕೊಂಡು ಇದ್ದರೆಂದರೆ ಸರಿ. 6 ತಿಂಗಳ ನಂತರ

**ಪಿ.ಡಬ್ಲ್ಯೂಃ 5**

ಸರ್ವಜ್ಞ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಇದ್ದರೆಂದರೆ ಸರಿ. ಒಂದು ವರ್ಷದ ನಂತರ ಶಿಕಾರಿಪುರಕ್ಕೆ ಸಂಸಾರ ಸಮೇತ ಸ್ಥಳಾಂತರ ಅದರೆಂದರೆ ಎಂದರೆ ಸರಿ. ಶಿಕಾರಿಪುರದಲ್ಲಿ 3 ವರ್ಷಗಳವರೆಗೆ ಇದ್ದು, ಆಮೇಲೆ ಕುಮಾರಪಟ್ಟಣ-ಹೊಸಪೇಟೆಗೆ ಹೋದರೆಂದರೆ ಸರಿ. 6 ತಿಂಗಳ ನಂತರ ಮತ್ತೆ ಮಾಸೂರಿಗೆ ಬಂದರೆಂದರೆ ಸರಿ. ಮೇಲೆ ಹೇಳಿದ ಎಲ್ಲಾ ಊರುಗಳಲ್ಲಿಯ ಬಾಡಿಗೆ ಮನೆಯ ಖರ್ಚುಗಳನ್ನೆಲ್ಲ ಸೋಮಪ್ಪನೆ ಕೊಟ್ಟಿದ್ದಾನೆಂದರೆ ಸರಿ. ಸೋಮಪ್ಪ ತನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸೋಮಪ್ಪ ತನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದರು ಸಹ ನೋಡಿಕೊಂಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸೋಮಪ್ಪ ಲಾರಿ ಚಾಲಕನು ಎಂದರೆ ಸರಿ. ಸೋಮಪ್ಪನು ಕೆಲವು ಸಾರಿ 15 ದಿವಸಗಳವರೆಗೆ ಲಾರಿ ಚಾಲಕನಾಗಿ ಹೋಗಿ ಬರುತ್ತಾನೆ ಎಂದರೆ ಸರಿ. ಆ ರೀತಿ ದುಡಿದ ಹಣವನ್ನು ಸೋಮಪ್ಪನು ತನ್ನ ಹೆಂಡತಿ ಮಕ್ಕಳನ್ನು ಜೋಪಾನ ಮಾಡಲು ಹಣವನ್ನು ತನ್ನ ಹೆಂಡತಿಗೆ ಶೇಖರಣೆ ಮಾಡಲು ಕೊಡುತ್ತಿದ್ದ ಎಂದರೆ ನಾನು ನೋಡಿಲ್ಲ. ಸದರಿ ಸಂಗತಿಯ ಬಗ್ಗೆ ನನಗೆ ಮಾಹಿತಿ ಇದ್ದರು ಸಹ ನೋಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ಊರುಗಳಲ್ಲಿಯ ಬಾಡಿಗೆ ಮನೆಗಳಲ್ಲಿ ಸೋಮಪ್ಪ ತನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದರು ಸಹ ನೋಡಿಕೊಂಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 2022 ರಲ್ಲಿ ಸೋಮಪ್ಪನು ಬಂದು ಮಾಸೂರಿನಲ್ಲಿ ಬಾಡಿಗೆ ಮನೆ ಮಾಡಿದನು ಎಂದರೆ ಸರಿ. ಆ ಸಮಯದಲ್ಲಿ ನಾನು ಮತ್ತು ನನ್ನ ಮಗ ಗಿರೀಶ ಅವರ ಮನೆಗೆ ಬಂದು ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಗಿರೀಶ ಅವರ ಮನೆಗೆ ಬಂದು ಹೋಗುತ್ತಿದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಇಲ್ಲಿ ಬಂದಿಲ್ಲ ಕೇರಳದಲ್ಲಿ ಕೆಲಸದಲ್ಲಿದ್ದಾನೆಂದು, ಆತನು ಅಲ್ಲಿಗೆ ಸುಮಾರು 10 ವರ್ಷಗಳು ಆದವು ಎಂದು ಸಾಕ್ಷಿ ಸ್ವತಃ ಹೇಳಿದ್ದಾರೆ.

4. ದಿಃ 23-02-2022 ರಂದು ಘಟನೆ ಆಯಿತೆಂದು ಹೇಳಿದ ದಿನ ಸೋಮಪ್ಪ ಮನೆಯಲ್ಲಿ ಇರಲಿಲ್ಲ, ಆಗ ಲಾರಿ ತೆಗೆದುಕೊಂಡು ಬೇರೆ ಊರಿಗೆ ಹೋಗಿದ್ದ ಎಂದರೆ ಬೇರೆ ಹುಡುಗಿಯನ್ನು ತೆಗೆದುಕೊಂಡು ಹೋಗಿದ್ದ ಎಂದು ಸಾಕ್ಷಿ ಉತ್ತರಿಸಿದ್ದಾರೆ. ರಾಜೇಶ್ವರಿ ಅನೈತಿಕ ಸಂಬಂಧ ಹೊಂದಿದ್ದಳು, ನನ್ನ ಮತ್ತು ನನ್ನ ಮಕ್ಕಳ ಸಹಾಯದಿಂದ ರಾಜೇಶ್ವರಿ ತಪ್ಪನ್ನು ಮುಚ್ಚಿ ಹಾಕಲು ಸೋಮಪ್ಪನ್ನು ಬೇರೆ ಹುಡುಗಿಯನ್ನು ತೆಗೆದುಕೊಂಡು ಹೋಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೋಮಪ್ಪನು ಮಾಸೂರಿನಲ್ಲಿ ತನ್ನ ತಂದೆ ತಾಯಿಯ ಮನೆಯಲ್ಲಿ ಇದ್ದ ಎಂದರೆ ಸರಿಯಲ್ಲ. ರಾಜೇಶ್ವರಿ ನನ್ನ ತಂಗಿಯ ಮಗಳಾಗಿದ್ದರಿಂದ ಆಕೆಗೆ ಸಹಾಯ ಮಾಡಲೆಂದು ಸುಳ್ಳು ಪ್ರಕರಣ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸೋಮಪ್ಪನ ತಮ್ಮನಾದ ಆರೋಪಿ ಬಸವರಾಜನು ತನ್ನ ಹೆಂಡತಿಯೊಂದಿಗೆ ಪ್ರತ್ಯೇಕ ಮನೆಯಲ್ಲಿ ವಾಸವಿದ್ದ ಎಂದರೆ ಸರಿ.

***<u>ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಹೆಚ್. ಆರ್. ಎ. ವಕೀಲರಿಂದಃ</u>***

ಆರೋಪಿತರಾದ ಬಸವರಾಜ ಮತ್ತು ಆತನ ಹೆಂಡತಿ ಜ್ಯೋತಿ 5-6 ವರ್ಷಗಳಿಂದ ಮನಸ್ತಾಪವಾಗಿ ಬೇರೆ ಬೇರೆಯಾಗಿದ್ದಾರೆ ಎಂದರೆ ಸರಿ. ಘಟನೆಯಾದಾಗ ಆರೋಪಿ ಜ್ಯೋತಿ ಘಟನಾ ಸ್ಥಳದಲ್ಲಿ ಇರಲಿಲ್ಲವೆಂದರೆ ಸರಿ. ಈ ಪ್ರಕರಣಕ್ಕೂ ಆರೋಪಿ ಜ್ಯೋತಿಗೂ ಯಾವುದೇ ರೀತಿಯ ಸಂಬಂಧವಿಲ್ಲದಿದ್ದರು ಸಹ ಉದ್ದೇಶ ಪೂರ್ವಕವಾಗಿ ಆಕೆಯನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದೇವೆ ಎಂದರೆ ನಾವೇಕೆ ಆಕೆಯನ್ನು ಆರೋಪಿಯನ್ನಾಗಿ ಮಾಡಿದೇವು ಎಂದು ಸಾಕ್ಷಿ ಉತ್ತರಿಸಿದ್ದಾರೆ. ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜೇಶ್ವರಿ ಹೇಳಿದಂತೆ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

***ಪಿ.ಡಬ್ಲ್ಯೂಃ 5***

***ಪಾಟೀ ಸವಾಲುಃ 6 ಮತ್ತು 7 ನೇ ಆರೋಪಿಗಳ ಪರ ಶ್ರೀ ಜೆ. ಬಿ. ಕೆ. ವಕೀಲರಿಂದಃ***

ಸೋಮಪ್ಪ ಮತ್ತು ರಾಜೇಶ್ವರಿ ಲಚ್ಚಪ್ಪನ ಮನೆಯಲ್ಲಿ 1 ವರ್ಷವಿದ್ದರು. ಯಾವ ವರ್ಷ ಇದ್ದರು ಎಂದು ಗೊತ್ತಿಲ್ಲ. ನಾನು ಹೇಳಿದ ರೀತಿ ಯಾವುದೇ ಘಟನೆ ನಡೆಯದಿದ್ದರು ಸಹ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 02-06-2026

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು